ಮೇಲ್ಕಂಡ ಕಾಮಗಾರಿಗಳಿಗೆ ಒಟ್ಟಾರೆ ರೂ. 85.30 ಲಕ್ಷಗಳಿಗೆ ಈ ಇಲಾಖಾ ಆಜ್ಞಾ ಪತ್ರ ಸಂ: ಡಿವೈಎಸ್ಎಸ್/ಯೋ–2/29/2011–12, ದಿನಾಂಕ: 29–01–2013 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2012–13ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಸಾಲಿನಲ್ಲಿ ರೂ. 3751.21 ಲಕ್ಷಗಳನ್ನು ಒದಗಿಸಿದ್ದು ಇದರಲ್ಲಿ 500.00 ಲಕ್ಷಗಳನ್ನು ಕಡಿತಗೊಳಿಸಿದ್ದರಿಂದ 2012–13ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.

2013–14ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಮುಖ ಆದ್ಯತೆ ನೀಡಿದ್ದು ಈ ಸಾಲಿನಲ್ಲಿ ರೂ. 3180.52 ಲಕ್ಷಗಳನ್ನು ಒದಗಿಸಿದ್ದು, ಇದರಲ್ಲಿ ರೂ. 500.00 ಲಕ್ಷಗಳನ್ನು ಕಡಿತಗೊಳಿಸಿದ್ದರಿಂದ ಮೇಲ್ಕಂಡ ಹೆಚ್ಚುವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

(ಊ) ಅನುದಾನ ಲಭ್ಯತೆ ಅನುಗುಣವಾಗಿ ಕಾಮಗಾರಿ ಕೈಗೊಳ್ಳಲಾಗುವುದು.

ಪ್ರವಾಸಿತಾಣವಾಗಿ ಅಭಿವೃದ್ಧಿಪಡಿಸುವುದು

5 (70) **ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ):–** ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಅ) ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಬೆಲಸಿಂದ ವನ್ಯ ಅರಣ್ಯ ಪ್ರದೇಶವು ಅತೀ ಪ್ರಾಮುಖ್ಯತೆಯನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಅರಣ್ಯ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಈ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ಅನುದಾನವನ್ನೇನಾದರೂ ಬಿಡುಗಡೆ ಮಾಡಿದೆಯೇ;

(ಈ) ಹಾಗಿದ್ದಲ್ಲಿ, ಅಭಿವೃದ್ಧಿಯ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ವಿವರಗಳನ್ನು ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):–

(ಅ) ಹೌದು.

(ಆ) ಈ ಅರಣ್ಯ ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಅರಣ್ಯ ಪ್ರದೇಶದ ಸುತ್ತ ಚೈನ್‌ಲಿಂಕ್ ಮೇಷ್ ಬೇಲಿ ನಿರ್ಮಿಸಲು ಉದ್ದೇಶಿಸಿದ್ದು, 2013–14ನೇ ಸಾಲಿನಲ್ಲಿ 1.50 ಕಿ.ಮೀ.

ಚೈನ್‌ಲಿಂಕ್ ಮೇಷ್ ಬೇಲಿಯನ್ನು ನಿರ್ಮಿಸಲಾಗಿದೆ. ಸದರಿ ಪ್ರದೇಶದಲ್ಲಿ ಮಾಹಿತಿ ಕೇಂದ್ರ, ಪ್ರವೇಶದ್ವಾರ, ಮಕ್ಕಳ ಆಟದ ಉದ್ಯಾನ, ದೋಣಿ ವಿಹಾರ ಧಾಮ, ಪರಗೋಲ, ಪ್ರಕೃತಿ ವನದಲ್ಲಿ ನಕ್ಷತ್ರವನ ನವಗ್ರಹವನಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

(ಇ) ಈ ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಈ ಕೆಳಗಿನಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಕ್ರ ಸಂ	ವರ್ಷ	ಬಿಡುಗಡೆ ಮಾಡಿದ ಅನುದಾನ
1	2011–12	10.29 ಲಕ್ಷ
2	2012–13	–
3	2013–14	26.03 ಲಕ್ಷ
	ಒಟ್ಟು	**36.32** ಲಕ್ಷ

ಅಲ್ಲದೆ, ಕರ್ನಾಟಕ ಪ್ರವಾಸೋದ್ಯಮ ಇಲಾಖೆಗೆ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ. 300.00 ಲಕ್ಷ ಅನುದಾನವನ್ನು ನೀಡಬೇಕೆಂದು ಪ್ರಸ್ತಾವನೆ ಸಲ್ಲಿಸಲಾಗಿದೆ.

(ಈ) ಈಗಾಗಲೇ ಬಿಡುಗಡೆಯಾಗಿರುವ ಅನುದಾನದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ:–

1. ಜೀವ ವೈವಿದ್ಯ ಔಷಧಿ ಮೂಲಿಕಾವನ ನಿರ್ಮಾಣ
2. ಬೆಲಸಿಂದ ಶ್ರೀವನವನ್ನು ಪುನರ್ ಚೇತನಗೊಳಿಸುವುದು.
3. ಮಾಹಿತಿ ಕೇಂದ್ರ ನಿರ್ಮಾಣ
4. ಸಿಮೇಂಟ್ ಬೆಂಚುಗಳ ನಿರ್ಮಾಣ
5. ಪಾದಚಾರಿ ರಸ್ತೆಗಳ ನಿರ್ಮಾಣ
6. ಮಕ್ಕಳ ಉದ್ಯಾನಕ್ಕೆ ಆಟಿಕೆಗಳ ಖರೀದಿ.
7. ಲಾನ್ ನಿರ್ಮಾಣ
8. ಚೈನ್‌ಲಿಂಕ್ ಬೇಲಿ ನಿರ್ಮಾಣ
9. ವೀಕ್ಷಣಾ ಗೋಪುರ ನಿರ್ಮಾಣ
10. ಕಾವಲುಗಾರರ ಕೊಠಡಿ ನಿರ್ಮಾಣ.